

# ಅಧ್ಯಾಯ–II
# ಪೂರ್ವಭಾವಿಯಾಗಿ ಯೋಜಿಸುವಿಕೆ ಮತ್ತು ಹಣಕಾಸು ನಿರ್ವಹಣೆ

**ಅಧ್ಯಾಯ: II**

**ಪೂರ್ವಭಾವಿಯಾಗಿ ಯೋಜಿಸುವಿಕೆ ಮತ್ತು ಹಣಕಾಸು ನಿರ್ವಹಣೆ**

*ಈ ಅಧ್ಯಾಯವು ಇಲಾಖೆಯಿಂದ ಮಾಡಬೇಕಿದ್ದಂತಹ ಪೂರ್ವಭಾವಿ ಯೋಜನೆಗಳು ಮತ್ತು ಹಣಕಾಸು ನಿರ್ವಹಣೆಯ ವಿಷಯಗಳ ಬಗ್ಗೆ ಚರ್ಚಿಸುತ್ತದೆ. ಇಲಾಖೆಯು ಯಾವುದೇ ಪರಿಪ್ರೇಕ್ಷಣ ಯೋಜನೆಯನ್ನು ತಯಾರಿಸಿರಲಿಲ್ಲ ಅಥವಾ ಸ್ಮಾರಕಗಳ ಸಂಶೋಧನೆಗಾಗಿ ಭೂಶೋಧನೆ, ಸಂರಕ್ಷಣೆ ಮತ್ತು ಸುರಕ್ಷತೆಗಾಗಿ ಆದ್ಯತೆಯ ಪಟ್ಟಿಯನ್ನು ತಯಾರಿಸಿರಲಿಲ್ಲ. ಇಲಾಖಾ ಕಾಮಗಾರಿಗಳಿಗಾಗಿ ಕ್ರಿಯಾ ಯೋಜನೆಗಳನ್ನು ಅನುಮೋದಿತ ಅಂತಿಮ ಆಯವ್ಯಯದ ಅನುಸಾರ ತಯಾರಿಸಲಾಗಿದ್ದಿತು.*

*2017-22ರ ಸಾಲುಗಳಲ್ಲಿ ಇಲಾಖೆಯು ಸಂರಕ್ಷಣಾ ಕಾಮಗಾರಿಗಳ ಮೇಲೆ ಹಂಚಿಕೆಯಾಗಿದ್ದಂತಹ ಆಯವ್ಯಯದ ಶೇಕಡ 54ರಷ್ಟು ಮೊತ್ತವನ್ನು ಭರಿಸಿದ್ದಿತಾದರೂ, ಸ್ಮಾರಕಗಳ ನಿರ್ವಹಣೆಯ ಕಡೆಗೆ ಭರಿಸಲಾಗಿದ್ದಂತಹ ಮೊತ್ತವು ಅತ್ಯಲ್ಪ ಪ್ರಮಾಣದಲ್ಲಿ ಆಗಿದ್ದಿತು. ಇದು ನಿರ್ವಹಣಾ ಕಾರ್ಯಚಟುವಟಿಕೆಗಳನ್ನು ಕಡೆಗಣಿಸುವಲ್ಲಿ ಪರಿಣಮಿಸಿದ್ದಿತು. ಮುಂದುವರೆದು, ಒಟ್ಟಾರೆ ವೆಚ್ಚದ ಶೇಕಡ 30ರಷ್ಟು ಮೊತ್ತವು ಆಡಳಿತಾತ್ಮಕ ವೆಚ್ಚಗಳ ಕಡೆಗೆ ಆಗಿದ್ದಿತು. ಪ್ರವೇಶ ಶುಲ್ಕ, ವಾಹನ ನಿಲುಗಡೆ ಶುಲ್ಕ, ಚಲನಚಿತ್ರ ಚಿತ್ರೀಕರಣ ಶುಲ್ಕ, ಇತ್ಯಾದಿಗಳಿಂದ ವರಮಾನವನ್ನು ಅತ್ಯುತ್ತಮ ಮಟ್ಟಕ್ಕೆ ತರುವ ಪ್ರಯತ್ನವನ್ನು ಮಾಡಿರಲಿಲ್ಲ ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.*

**ಪೂರ್ವಭಾವಿಯಾಗಿ ಯೋಜನೆಗಳನ್ನು ರೂಪಿಸುವಿಕೆ**

### *2.1 ಪರಿಪ್ರೇಕ್ಷಣ ಯೋಜನೆ ಮತ್ತು ವಾರ್ಷಿಕ ಸಂರಕ್ಷಣಾ ಯೋಜನೆಗಳನ್ನು ತಯಾರಿಸದಿದ್ದುದು*

ಪುರಾತತ್ವ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು (ಇಲಾಖೆ) ಪುರಾತತ್ವ ಸ್ಮಾರಕಗಳ ಸಂಶೋಧನೆ, ಭೂಅಗೆತ, ಸಂರಕ್ಷಣೆ ಮತ್ತು ಸುರಕ್ಷತೆಗಳಿಗೆ ಜವಾಬ್ದಾರಿಯುತವಾಗಿರುತ್ತದೆ. ಒಂದು ದೀರ್ಘಾವಧಿ ಪರಿಪ್ರೇಕ್ಷಣಾ ಯೋಜನೆಯು ಒಂದು ಇಲಾಖೆಯ ಬದ್ಧತೆಯನ್ನು ಸಾಧಿಸಿಕೊಳ್ಳುವ ಸಲುವಾಗಿ ಮಾರ್ಗವನ್ನು ರೂಪಿಸಿಕೊಡುತ್ತದೆ. ಕರ್ನಾಟಕ ರಾಜ್ಯದ ಸಮೃದ್ಧ ಸಂಪದ್ಭರಿತ ಐತಿಹಾಸಿಕ ಸ್ಮಾರಕಗಳನ್ನು ಪರಿಗಣಿಸಿದಂತೆ, ರಾಜ್ಯದ ವಿವಿಧ ಜಿಲ್ಲೆಗಳು/ತಾಲ್ಲೂಕುಗಳಲ್ಲಿ ಐತಿಹಾಸಿಕವಾಗಿ ಗಮನಾರ್ಹವಾದಂತಹ ಸ್ಮಾರಕಗಳು/ಪಳೆಯುಳಿಕೆಗಳನ್ನು ಗುರುತಿಸುವ ಸಲುವಾಗಿ ಸಂಶೋಧನೆಯನ್ನು ನಿರೀಕ್ಷಿಸುತ್ತಿರುವಂತಹ ನಿವೇಶನಗಳು ಇರುವಂತಹ ಸಾಧ್ಯತೆಗಳಿರುತ್ತವೆ. ಆದ್ದರಿಂದ, ಜಿಲ್ಲೆ/ತಾಲ್ಲೂಕುವಾರು ನಿವೇಶನಗಳನ್ನು ಗುರುತಿಸುವ ಸಲುವಾಗಿ ಒಂದು ಪೂರ್ವಭಾವಿಯಾಗಿ ರೂಪಿಸಲಾಗಿರುವಂತಹ ಯೋಜನೆಯನ್ನು ಇಲಾಖೆಯು ಹೊಂದಿರುವ ಹಾಗೂ ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಬೇಕಾದ ಕ್ಷೇತ್ರಗಳನ್ನು ಗುರುತಿಸುವ ಹಾಗೂ ರಾಜ್ಯದಲ್ಲಿನ ಅಂತಹ ಎಲ್ಲಾ ಸಂಭಾವ್ಯ ನಿವೇಶನಗಳನ್ನು ಅಂತಿಮವಾಗಿ ವ್ಯಾಪಿಸುವ ಅಗತ್ಯತೆಯಿರುತ್ತದೆ. ಇಲಾಖೆಯು ಕಾಲಾವಕಾಶ, ಸಾಮರ್ಥ್ಯತೆಗಳ ನಿರ್ಮಾಣ ಅಥವಾ ಅಭಿವೃದ್ಧಿ, ಹಣಕಾಸಿನ ಸಂಪನ್ಮೂಲಗಳು, ವಿಶ್ವವಿದ್ಯಾನಿಲಯಗಳು/ತಜ್ಞರುಗಳೊಂದಿಗೆ ಸಮನ್ವಯ–ಸಹಕಾರ ಹಾಗೂ ಸಂಬಂಧಿತ ಕಾರ್ಯಗಳ ಒಂದು ಪರಿಪೂರ್ಣ ವ್ಯಾಪ್ತಿಯ ಅಗತ್ಯತೆಯನ್ನು ಹೊಂದಿರುವಂತಹ ಈ ಒಂದು ವಿಶೇಷಜ್ಞ ಕಾರ್ಯಚಟುವಟಿಕೆಗಳಿಗೆ ಇಲಾಖೆಯು ಜವಾಬ್ದಾರಿಯುತವಾಗಿರುವುದರಿಂದ, ಒಂದು ದೀರ್ಘಾವಧಿಯ ನೈಪುಣ್ಯತೆಯಿಂದ ಕೂಡಿದಂತಹ ಯೋಜನೆಯು ಇಲಾಖೆಗೆ ನೀಡಲಾಗಿರುವಂತಹ ಬದ್ಧತೆಯನ್ನು ಸಾಧಿಸುವ ಸಲುವಾಗಿ ಅದರ ಪಯಣವನ್ನು ರೂಪಿಸುವ ಸಲುವಾಗಿ ಹಾಗೂ ವ್ಯಾಪಕಗೊಳಿಸುವ ಸಲುವಾಗಿ ಅತ್ಯಗತ್ಯವಾಗಿದ್ದಿತು. ಪರಿಣಾಮಕಾರಿತ್ವದಿಂದ ಕೂಡಿದಂತಹ ಕಾರ್ಯಗತಗೊಳಿಸುವಿಕೆ, ಗುರಿಯನ್ನು ನಿಗದಿಪಡಿಸುವಿಕೆ ಹಾಗೂ ಮೇಲ್ವಿಚಾರಣೆಗಾಗಿ ದೀರ್ಘಾವಧಿ ಯೋಜನೆಯು ಮಧ್ಯಮಾವಧಿಗೆ (3–5 ವರ್ಷಗಳು) ಹಾಗೂ ವಾರ್ಷಿಕ ಯೋಜನೆಗಳಿಗೆ ಮಾರ್ಪಾಡುಗೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕಿದ್ದಿತು.

ಇಲಾಖೆಯು ತನ್ನ ಬದ್ಧತೆಯಿಂದ ಕೂಡಿದಂತಹ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಸಂಬಂಧಿಸಿದಂತೆ ಅಳವಡಿಸಿಕೊಂಡಿದ್ದಂತಹ ಯೋಜನಾ ಪ್ರಕ್ರಿಯೆಗಳನ್ನು ಲೆಕ್ಕಪರಿಶೋಧನೆಯು ಸಮೀಕ್ಷಿಸಿತು ಹಾಗೂ ಈ ಕೆಳಗಿನ ಅಂಶಗಳನ್ನು ಗಮನಿಸಿತು:

i. ತನ್ನ ಬದ್ಧತೆಯಿಂದ ಕೂಡಿದಂತಹ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಇಲಾಖೆಯು ಯಾವುದೇ ದೀರ್ಘಾವಧಿ ಅಥವಾ ಮಧ್ಯಮಾವಧಿ ಪೂರ್ವಭಾವಿ ಯೋಜನೆಗಳನ್ನು ತಯಾರಿಸಿರಲಿಲ್ಲ.

ii. ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯು ನೀಡಿರುವಂತಹ ಪುರಾತತ್ವ ಸ್ಮಾರಕಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ಕಾರ್ಯನೀತಿಯಿಂದ ಬದ್ಧತೆಯನ್ನು ಹೊಂದಿರುವಂತಹ ಯಾವುದೇ ವಾರ್ಷಿಕ ಸಂರಕ್ಷಣಾ ಪೂರ್ವಭಾವಿ ಯೋಜನೆಯನ್ನು ತಯಾರಿಸಿರಲಿಲ್ಲ.


iii. ಇಲಾಖೆಯು ಭೂ ಅಗೆತ, ಸಂಶೋಧನೆ, ಸಂರಕ್ಷಣೆ ಮತ್ತು ಸುರಕ್ಷತಾ ಕಾರ್ಯಚಟುವಟಿಕೆಗಳನ್ನು ಒಂದು ಕಾಲಮಿತಿಯೊಳಗೆ ನಡೆಸಿಕೊಂಡು ಹೋಗುವ ಸಲುವಾಗಿ ನಿವೇಶನಗಳ ನಿರ್ಧಾರಣೆ ಮತ್ತು ಆದ್ಯತೆಯನ್ನು ನೀಡುವಿಕೆಗಾಗಿ ಯಾವುದೇ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸಿರಲಿಲ್ಲ.

iv. ಮುಂದುವರೆದು, ಇಲಾಖೆಯು ಆದ್ಯತೆ ಕಾಮಗಾರಿಗಳ ಬಗ್ಗೆ ತನ್ನ ವಿಭಾಗೀಯ ಕಚೇರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳುವ ಸಲುವಾಗಿ ಅಥವಾ ವಿಭಾಗೀಯ ಮಟ್ಟಗಳಲ್ಲಿ ಮಾಡಲಾಗಿರುವಂತಹ ಪುರಾತತ್ವಶಾಸ್ತ್ರೀಯ ನಿರ್ಧಾರಣೆ ಆಧಾರದ ಮೇರೆಗೆ ಮಾಹಿತಿಯನ್ನು ಪಡೆದುಕೊಳ್ಳಲು ಯಾವುದೇ ಕಾರ್ಯವಿಧಾನವನ್ನೂ ಹೊಂದಿರಲಿಲ್ಲ.

v. ಭೂ ಅಗೆತ, ಸಂರಕ್ಷಣೆ ಮತ್ತು ಸುರಕ್ಷತಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿತ ಇಲಾಖಾ ಕಾಮಗಾರಿಗಳಿಗಾಗಿ ಕ್ರಿಯಾ ಯೋಜನೆಗಳನ್ನು ಶಾಸಕಾಂಗವು ಅನುಮೋದಿಸಿರುವಂತಹ ಆಯವ್ಯಯದ ಆಧಾರದ ಮೇರೆಗೆ ವಾರ್ಷಿಕವಾಗಿ ತಯಾರಿಸಲಾಗುತ್ತಿದ್ದಿತು.

ಇಲಾಖೆಯು ಯಾವುದೇ ಪೂರ್ವಭಾವಿ ಯೋಜನೆಗಳನ್ನು ತಯಾರಿಸಿರಲಿಲ್ಲವಾದ್ದರಿಂದ ಇಲಾಖೆಯು ಪ್ರತೀ ವರ್ಷವೂ ಆಯವ್ಯಯ ಅನುದಾನಗಳನ್ನು ಕೋರುವ ವೇಳೆಯಲ್ಲಿ ಇಲಾಖೆಯು ಪ್ರಕ್ಷೇಪಿಸಿರುವಂತಹ ಹಣಕಾಸಿನ ಸಮರ್ಪಕತೆಯನ್ನು ಲೆಕ್ಕಪರಿಶೋಧನೆಯು ನಿಖರವಾಗಿ ನಿರ್ಧಾರಣೆ ಮಾಡಲಾಗಲಿಲ್ಲ. ಮುಂದುವರೆದು, ಇಲಾಖೆಯು ಸಂಶೋಧನೆ, ಸಂರಕ್ಷಣೆ ಹಾಗೂ ನಿರ್ವಹಣಾ ಕಾರ್ಯಗಳಿಗಾಗಿ ಅಗತ್ಯವಿರುವಂತಹ ತಾಂತ್ರಿಕ ಸಿಬ್ಬಂದಿಯನ್ನು ಹಾಗೂ ಅಲ್ಲದೆಯೇ ನಿಗಾವಣೆ ಮತ್ತು ಕಾವಲು ಕಾಯುವಿಕೆ ಸಿಬ್ಬಂದಿಯ ಅಗತ್ಯತೆಯನ್ನು ನಿರ್ಧಾರಣೆ ಮಾಡಿರಲಿಲ್ಲ (***ಕಂಡಿಕೆ 2.2 ಮತ್ತು 4.7ರಲ್ಲಿ ಸವಿಸ್ತೃತವಾಗಿ ತಿಳಿಸಲಾಗಿದೆ***).

ಸರ್ಕಾರವು ತನ್ನ ಉತ್ತರದಲ್ಲಿ (ಆಗಸ್ಟ್ 2023) ಲೆಕ್ಕಪರಿಶೋಧನೆಯ ಶಿಫಾರಸನ್ನು ಅನುಸರಣೆಗಾಗಿ ಗುರುತಿಸಲಾಗಿದೆ ಮತ್ತು ದೀರ್ಘಾವಧಿ ಪರಿಪ್ರೇಕ್ಷಣಾ ಯೋಜನೆಯನ್ನು ರೂಪಿಸಲು ಇಲಾಖೆಯು ಒಪ್ಪಿಕೊಂಡಿದೆ ಎಂದು ಹೇಳಿದೆ.




**ಛಾಯಾಚಿತ್ರ ಸಂಖ್ಯೆ 2.1: ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ಹೊಲಕೊಂಡದಲ್ಲಿನ ಬಹಮನಿ ಗೋಪುರಗಳ ಸ್ಥಿತಿ – ಇವುಗಳು ತತ್‌ಕ್ಷಣದಲ್ಲಿಯೇ ಸಂರಕ್ಷಣಾ ಕಾರ್ಯದ ಅಗತ್ಯತೆಯನ್ನು ಹೊಂದಿರುತ್ತವೆ.**

**ಶಿಫಾರಸು 1:**

**i.** **ಗುರುತಿಸಲ್ಪಟ್ಟಿರುವಂತಹ ಸ್ಮಾರಕಗಳ ರಕ್ಷಣೆ ಹಾಗೂ ಸುರಕ್ಷತೆಗಾಗಿ ದೀರ್ಘಾವಧಿ ಪೂರ್ವಭಾವಿ ಯೋಜನೆ, ಮಧ್ಯಮಾವಧಿ ಪೂರ್ವಭಾವಿ ಯೋಜನೆ ಹಾಗೂ ವಾರ್ಷಿಕ ಸಂರಕ್ಷಣಾ ಯೋಜನೆಗಳನ್ನು ತಯಾರಿಸುವ ಸಲುವಾಗಿ ಕ್ರಮವನ್ನು ಕೈಗೊಳ್ಳತಕ್ಕದ್ದು.**

**ii.** **ಮಾಡಲಾಗುವಂತಹ ಪೂರ್ವಭಾವಿ ಯೋಜನೆಗಳು ಜಿಲ್ಲೆ/ತಾಲ್ಲೂಕುವಾರು ಪ್ರಮುಖ ನಿವೇಶನಗಳನ್ನು ಗುರುತಿಸುವ ಹಾಗೂ ಕಂಡುಕೊಳ್ಳುವ/ಸಂಶೋಧಿಸುವ ಸಲುವಾಗಿ ಹಾಗೂ ಅಲ್ಲದೆಯೇ ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಬೇಕಾದಂತಹ ಪ್ರದೇಶಗಳ ಪಟ್ಟಿಯನ್ನು ತಯಾರಿಸುವ ಸಲುವಾಗಿ ಕಾಲಮಿತಿಯನ್ನು ನಿಗದಿಗೊಳಿಸತಕ್ಕದ್ದು.**

**iii.** **ಬದ್ಧತೆಯಿಂದ ಕೂಡಿದಂತಹ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ತಾಂತ್ರಿಕ ಸಿಬ್ಬಂದಿ ಹಾಗೂ ಹಣಕಾಸು ಸಂಪನ್ಮೂಲಗಳನ್ನು ಪೂರ್ವಭಾವಿ ಯೋಜನೆಗಳ ಆಧಾರದ ಮೇರೆಗೆ ಪ್ರಕ್ಷೇಪಿಸತಕ್ಕದ್ದು.**

## ಆಯವ್ಯಯ ಹಂಚಿಕೆ ಮತ್ತು ವೆಚ್ಚಗಳು

**2.2** ಬದ್ಧತೆಯಿಂದ ಕೂಡಿದಂತಹ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ (ಆಡಳಿತಾತ್ಮಕ ವೆಚ್ಚಗಳೂ ಒಳಗೊಂಡಂತೆ) ಹಣಕಾಸು ಮೂಲಗಳನ್ನು ಇಲಾಖೆಗೆ ಆಯವ್ಯಯ ಹಂಚಿಕೆಗಳ ಮೂಲಕ ರಾಜ್ಯ ಸರ್ಕಾರವು ಒದಗಿಸುತ್ತದೆ. ಆಯವ್ಯಯ ಹಂಚಿಕೆ ಕಾರ್ಯವಿಧಾನವನ್ನು ಕರ್ನಾಟಕ ಆಯವ್ಯಯ ಕೈಪಿಡಿಯಲ್ಲಿ ತಿಳಿಸಲಾಗಿರುವುದು.

ಇಲಾಖೆಯಲ್ಲಿ ಆಯವ್ಯಯ ಪ್ರಕ್ರಿಯೆಯು ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿನಲ್ಲಿ ಪ್ರಾರಂಭಗೊಳ್ಳುವುದು. ಇಲಾಖೆಯು ಅಂದಾಜು ಮಾಡಲ್ಪಟ್ಟಿರುವ ವೆಚ್ಚಗಳು, ವರಮಾನ ಹಾಗೂ ಸಾಮಾನ್ಯ ವೆಚ್ಚಗಳ ವಿವರಗಳನ್ನು ಪ್ರವಾಸೋದ್ಯಮ ಇಲಾಖೆಗೆ (ಆಡಳಿತಾತ್ಮಕ ನಿಯಂತ್ರಣದ ಇಲಾಖೆ) ಸಲ್ಲಿಸತಕ್ಕದ್ದು. ಪ್ರವಾಸೋದ್ಯಮ ಇಲಾಖೆಯು ಅವುಗಳನ್ನು ಹಣಕಾಸು ಇಲಾಖೆಗೆ ಅಂದಾಜುಗಳ ಪರಿಶೀಲನೆಯ ನಂತರ ಹಣಕಾಸಿನ ಹಂಚಿಕೆಗಾಗಿ ಕಳುಹಿಸಿಕೊಡುತ್ತದೆ. ಹಣಕಾಸು ಇಲಾಖೆಯು ಅನುಮೋದಿಸಿದ ಆಯವ್ಯಯ ಅಂದಾಜುಗಳನ್ನು ನಂತರದಲ್ಲಿ ರಾಜ್ಯದ ವಾರ್ಷಿಕ ಅಂದಾಜಿನಲ್ಲಿ ಸೇರಿಸಲಾಗುವುದು.

2021–22 ಸಾಲಿಗೆ ಹೊರತುಪಡಿಸಿದಂತೆ ಸಂಬಂಧಿತ ಆಯವ್ಯಯ ದಾಖಲೆಗಳು/ ಕೋರಲಾಗಿದ್ದ ಹಣಕಾಸಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಲಭ್ಯವಾಗುವಂತೆ ಮಾಡಲಿಲ್ಲವಾದ್ದರಿಂದ, ಇಲಾಖೆಯ ಹಣಕಾಸು ಅಗತ್ಯತೆಗೆ ಹಾಗೂ ಹಣಕಾಸು ಇಲಾಖೆಯಿಂದ ಅಂತಿಮ ಆಯವ್ಯಯ ಹಂಚಿಕೆಗೆ ಆಧಾರವನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಆಯವ್ಯಯ ಪ್ರಸ್ತಾವನೆಗಳಲ್ಲಿ ಪ್ರಕ್ಷೇಪಿಸಲಾಗಿದ್ದಂತಹ ಅಂಕಿಸಂಖ್ಯೆಗಳಿಗೆ ಆಧಾರ/ ತಾರ್ಕಿಕ ವಿವರಣೆಯನ್ನೂ ಸಹ ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ ಹಾಗೂ ಪೂರ್ವಭಾವಿ ಯೋಜನೆಗಳ ಕೊರತೆಯು ಆಯವ್ಯಯ ಪ್ರಸ್ತಾವನೆಗಳನ್ನು ವೈಜ್ಞಾನಿಕವಾಗಿ ಅಂದಾಜು ಮಾಡಿರಲಿಲ್ಲ ಎಂಬುದನ್ನು ಸೂಚಿಸುತ್ತಿದ್ದಿತು.

ಇಲಾಖೆಯು ಅಂದಾಜುಗಳನ್ನು ತಯಾರಿಸಿತು ಹಾಗೂ ಅವುಗಳನ್ನು ಪ್ರವಾಸೋದ್ಯಮ ಇಲಾಖೆಯ ಮೂಲಕ ಕಳುಹಿಸದೆಯೇ ನೇರವಾಗಿ ಹಣಕಾಸು ಇಲಾಖೆಗೆ ಸಲ್ಲಿಸಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಶಾಸಕಾಂಗದಿಂದ ಆಯವ್ಯಯವು ಅನುಮೋದನೆಗೊಂಡನಂತರ ಹಂಚಿಕೆಯಾಗಿರುವ ಮೊತ್ತದ ಆಧಾರದ ಮೇರೆಗೆ ಇಲಾಖೆಯ ಕಾರ್ಯಕ್ರಮಗಳಿಗಾಗಿ ಕ್ರಿಯಾ ಯೋಜನೆಗಳನ್ನು ತಯಾರಿಸಲಾಗುತ್ತಿದ್ದಿತು ಹಾಗೂ ಅನುಮೋದನೆಗಾಗಿ ಆಡಳಿತಾತ್ಮಕ ನಿಯಂತ್ರಣ ಇಲಾಖೆಗೆ ಕಳುಹಿಸಿಕೊಟ್ಟಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2017–22 ಸಾಲುಗಳಲ್ಲಿ ಕಮೀಷನರೇಟ್‌ಗೆ ಆಯವ್ಯಯ ಹಂಚಿಕೆ ಹಾಗೂ ಅವುಗಳ ಉಪಯುಕ್ತತೆಯ ವಿವರಗಳನ್ನು ಈ ಕೆಳಗೆ ತೋರಿಸಲಾಗಿರುವುದು:

**ಕೋಷ್ಟಕ ಸಂಖ್ಯೆ 2.1: 2017–22 ರಲ್ಲಿ ಹಂಚಿಕೆ ಮಾಡಲಾಗಿದ್ದ ಹಾಗೂ ಉಪಯೋಗಿಸಿಕೊಳ್ಳಲಾಗಿದ್ದ ಆಯವ್ಯಯದ ವಿವರಗಳು.**

**(ಕೋಟಿ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಹಂಚಿಕೆ | ವೆಚ್ಚ | ಉಪಯೋಗಿಸಿಕೊಳ್ಳಲಾಗಿದ್ದ ಶೇಕಡಾವಾರು ಮೊತ್ತ |
|---|---|---|---|---|
| **1** | **2017–18** | 41.45 | 29.74 | 71.76 |
| **2** | **2018–19** | 27.48 | 24.32 | 88.52 |
| **3** | **2019–20** | 26.19 | 22.90 | 87.42 |
| **4** | **2020–21** | 23.01 | 19.30 | 83.84 |
| **5** | **2021–22** | 28.68 | 27.39 | 95.50 |
| | **ಒಟ್ಟು** | **146.81** | **123.65** | **84.22** |

**(ಮೂಲ: ಇಲಾಖೆಯು ಒದಗಿಸಿದ ಮಾಹಿತಿಯಂತೆ.)**

ಹಂಚಿಕೆ ಮಾಡಲಾಗಿದ್ದ ಆಯವ್ಯಯದ ಜೊತೆಗೆ ಇಲಾಖೆಯು ಖಾಸಗಿ ದೇಣಿಗೆಗಳು, ಆಡಳಿತಾತ್ಮಕ ಇಲಾಖೆಯಿಂದ (ಪ್ರವಾಸೋದ್ಯಮ ಇಲಾಖೆ)/ಇತರೆ ಸರ್ಕಾರಿ ಇಲಾಖೆಗಳಿಂದ (ಧಾರ್ಮಿಕ ದತ್ತಿ ಇಲಾಖೆ) ಯಿಂದ ಬಂದಂತಹ ಕಾಣಿಕೆಗಳ ಮೂಲಕ ಸಂರಕ್ಷಣಾ ಕಾಮಗಾರಿಗಳನ್ನು ಕೂಡ ಕಾರ್ಯಗತಗೊಳಿಸಿರುವುದು.

**ಕೋಷ್ಟಕ ಸಂಖ್ಯೆ 2.2: 2017–22ರಲ್ಲಿ ಹಂಚಿಕೆ ಮಾಡಲಾಗಿದ್ದಂತಹ ಒಟ್ಟಾರೆ ಆಯವ್ಯಯ ಹಾಗೂ ಉಪಯೋಗಿಸಿಕೊಳ್ಳಲಾಗಿದ್ದ ಮೊತ್ತಗಳ ವೆಚ್ಚವಾರು ವಿಭಜನೆ**

**(ಕೋಟಿ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | ಹಂಚಿಕೆಗಳು | ಒಟ್ಟಾರೆ ಹಂಚಿಕೆಗೆ ಹೋಲಿಸಿದಂತೆ ಶೇಕಡವಾರು ಹಂಚಿಕೆ | ವೆಚ್ಚ | ಹಂಚಿಕೆಗೆ ಪ್ರತಿಯಾಗಿ ಉಪಯೋಗಿಸಿ ಕೊಳ್ಳಲಾಗಿದ್ದ ಶೇಕಡವಾರು ಮೊತ್ತ |
|---|---|---|---|---|---|
| 1 | ಆಡಳಿತಾತ್ಮಕ ವೆಚ್ಚ | 41.37 | 28.18 | 37.22 | 89.96 |
| 2 | ಇತರೆ ವೆಚ್ಚ (ಸಂರಕ್ಷಣಾ ಕಾಮಗಾರಿಗಳ ಮೇಲಿನ ವೆಚ್ಚವೂ ಒಳಗೊಂಡಂತೆ) | 74.42 | 50.69 | 66.52 | 89.39 |
| 3 | ನಿರ್ವಹಣಾ ವೆಚ್ಚ | 1.88 | 1.28 | 1.32 | 70.21 |
| 4 | ಬಂಡವಾಳ ಹೂಡಿಕೆ (ಪ್ರಧಾನ ಕಾಮಗಾರಿಗಳು) | 20.17 | 13.74 | 15.06 | 74.66 |
| 5 | ಪ್ರಾಧಿಕಾರಗಳಿಗೆ[5] ಅನುದಾನ | 8.97 | 6.11 | 3.53 | 39.34 |
| | | **146.81** | **100.00** | **123.65** | **84.22** |

**(ಮೂಲ: ಇಲಾಖೆಯು ಒದಗಿಸಿದ ಮಾಹಿತಿಯಂತೆ)**

ಇಲಾಖೆಯು ಪ್ರಾಥಮಿಕ ಚಟುವಟಿಕೆಯು ಪಾರಂಪರಿಕ ನಿವೇಶನಗಳ ಸಂರಕ್ಷಣೆ ಮತ್ತು ನಿರ್ವಹಣೆ ಆಗಿರುವುದರಿಂದ ಆಡಳಿತಾತ್ಮಕ ವೆಚ್ಚಗಳ ಮೇಲೆ ಒಂದು ಸಣ್ಣ ಮೊತ್ತವನ್ನು ಭರಿಸುವುದರೊಂದಿಗೆ ಬಹುಪಾಲು ಮೊತ್ತವನ್ನು ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ ಮತ್ತು ಸುರಕ್ಷತೆಗೆ ಸಂಬಂಧಿತ ಕಾಮಗಾರಿಗಳ ಮೇಲೆ ಭರಿಸುವುದನ್ನು ನಿರೀಕ್ಷಿಸಲಾಗುತ್ತದೆ. ಆಯವ್ಯಯ ಹಂಚಿಕೆ ಹಾಗೂ ವೆಚ್ಚಗಳು ಈ ಎರಡು ಕಾರ್ಯಚಟುವಟಿಕೆಗಳ ಆದ್ಯತೆಯನ್ನು ಪ್ರತಿಬಿಂಬಿಸತಕ್ಕದ್ದು. ಆಯವ್ಯಯದ ಪ್ರಕ್ರಿಯೆ ಮತ್ತು

[5] ಹಂಪಿ ವಿಶ್ವ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ ಹಾಗೂ ಚಾಲುಕ್ಯರ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ.

ತದನಂತರದಲ್ಲಿ ಹಣಕಾಸಿನ ಉಪಯೋಗದಲ್ಲಿನ ಅಸಮರ್ಪಕತೆಗಳು ಈ ಕೆಳಗಿನವುಗಳಿಂದ ಎದ್ದು ಕಾಣುತ್ತವೆ.

- 2021–22ಕ್ಕೆ ಅಂತ್ಯಗೊಂಡ ಐದು ವರ್ಷಗಳ ಅವಧಿಯಲ್ಲಿ ಹಂಚಿಕೆಯಾಗಿದ್ದ ಒಟ್ಟು ಆಯವ್ಯಯ ₹ 146.81 ಕೋಟಿಗೆ ಎದುರಾಗಿ, ಇಲಾಖೆಯು ತನ್ನ ಮೂಲ ಚಟುವಟಿಕೆಗಳಾದ ಸುರಕ್ಷತೆ ಮತ್ತು ಸಂರಕ್ಷಣೆ ಕಾಮಗಾರಿಗಳಿಗೆ ಕೇವಲ ₹ 81.58 ಕೋಟಿಯಷ್ಟು ಉಪಯೋಗಿಸಿತ್ತು. ಉಳಿದ ಮೊತ್ತವನ್ನು ಆಡಳಿತಾತ್ಮಕ ನಿರ್ವಹಣೆಗೆ ಮತ್ತು ಪರಂಪರೆ ಚಟುವಟಿಕೆಗಳಿಗೆ ಅನುದಾನದ ರೀತಿಯಲ್ಲಿ ಉಪಯೋಗಿಸಲಾಗಿತ್ತು.

- ಐದು ವರ್ಷಗಳ ಅವಧಿಯಲ್ಲಿ ಆಡಳಿತಾತ್ಮಕ ವೆಚ್ಚಗಳು ಒಟ್ಟಾರೆ ಹಂಚಿಕೆಯ ಶೇಕಡ 28.18ರಷ್ಟು ಆಗಿದ್ದಿತು ಹಾಗೂ ಅದು ಒಟ್ಟಾರೆ ವೆಚ್ಚದ ಶೇಕಡ 30.10 ರಷ್ಟು ಆಗಿದ್ದಿತು. 2021–22ರಲ್ಲಿ ಆಡಳಿತಾತ್ಮಕ ವೆಚ್ಚಗಳು ಒಟ್ಟಾರೆ ಹಂಚಿಕೆಯ ಶೇಕಡ 36.27ರಷ್ಟು ಹಾಗೂ ಒಟ್ಟಾರೆ ವೆಚ್ಚಗಳ ಶೇಕಡ 34.18ರಷ್ಟು ಆಗಿದ್ದವು.


- ಐದು ವರ್ಷಗಳಿಗೆ ನಿರ್ವಹಣಾ ವೆಚ್ಚಗಳ ಕಡೆಗೆ ಸರ್ಕಾರದಿಂದ ಮಾಡಲಾದಂತಹ ಆಯವ್ಯಯ ಹಂಚಿಕೆಯು ಕೇವಲ ₹ 1.88 ಕೋಟಿ ಆಗಿದ್ದಿತು, ಅದರ ಪೈಕಿ ₹ 1.49 ಕೋಟಿ ಮೊತ್ತವು ವಸ್ತು ಸಂಗ್ರಹಾಲಯಗಳಿಗಾಗಿ ಆಗಿದ್ದಿತು. ₹ 39.00 ಲಕ್ಷ ಅತ್ಯಲ್ಪ ಮೊತ್ತವನ್ನು ಪಾರಂಪರಿಕ ಸ್ಮಾರಕಗಳ ನಿರ್ವಹಣೆಗಾಗಿ ಹಂಚಿಕೆ ಮಾಡಲಾಗಿದ್ದಿತು.

- ಖರ್ಚಾಗದೇ ಉಳಿದಿದ್ದಂತಹ ₹ 23.16 ಕೋಟಿ[6] ಮೊತ್ತವನ್ನು ಹೊರಸೆಳೆಯಲಾಯಿತು ಹಾಗೂ ಸರ್ಕಾರದ ಅನುಮೋದನೆಯೊಂದಿಗೆ ಇಲಾಖೆಯ ವೈಯಕ್ತಿಕ ಠೇವಣಿ (ಪಿಡಿ) ಖಾತೆಗೆ ವರ್ಗಾಯಿಸಲಾಯಿತು. ಈ ಮೊತ್ತವು ಪ್ರಮುಖವಾಗಿ ಸಂರಕ್ಷಣಾ ಕಾಮಗಾರಿಗಳಿಗಾಗಿಯೇ ಇತರೆ ವೆಚ್ಚಗಳ ಅಡಿಯಲ್ಲಿ ಹಂಚಿಕೆ ಮಾಡಲಾಗಿದ್ದ ₹ 7.90 ಕೋಟಿ ಮೊತ್ತವನ್ನು ಒಳಗೊಂಡಿದ್ದಿತು.



**ಛಾಯಾಚಿತ್ರ ಸಂಖ್ಯೆ 2.2: ರಾಯಚೂರು ಜಿಲ್ಲೆಯ ಜಲದುರ್ಗಾ ಕೋಟೆಯನ್ನು ಸಂರಕ್ಷಿಸದಿರುವುದು.**

[6] ₹ 146.81 ಕೋಟಿ ಮೊತ್ತದಷ್ಟು ಹಂಚಿಕೆ ಇದರಿಂದ ₹ 123.65 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಕಳೆಯುವುದು = ₹ 23.16 ಕೋಟಿ.




**ಛಾಯಾಚಿತ್ರ ಸಂಖ್ಯೆ 2.3: ಬೆಂಗಳೂರಿನ ವೆಂಕಟಪ್ಪ ಕಲಾ ಗ್ಯಾಲರಿಯ ಛಾವಣಿಯ ದುಃಸ್ಥಿತಿ**

ಹೀಗಾಗಿ, ಬಜೆಟ್ ಪ್ರಕ್ರಿಯೆಯಲ್ಲಿ ಅಂದಾಜು ವೈಜ್ಞಾನಿಕ ತಳಹದಿಯ ಕೊರತೆ ಮತ್ತು ಅಗತ್ಯ ನಿರ್ವಹಣಾ ಚಟುವಟಿಕೆಗಳಿಗೆ ಅಲ್ಪ ಪ್ರಮಾಣದ ಹಂಚಿಕೆಯಂತಹ ಅಸಮರ್ಪಕತೆಗಳಿವೆ.

***ಶಿಫಾರಸ್ಸು 2::***
***ಸರ್ಕಾರವು ರಾಜ್ಯದ ಸಂಪದ್ಭರಿತ ಪುರಾತತ್ವ ಸ್ಮಾರಕಗಳ ಸಂರಕ್ಷಣೆಗೆ ಆದ್ಯತೆಯನ್ನು ನೀಡತಕ್ಕದ್ದು ಹಾಗೂ ಪುರಾತನ / ಪುರಾತತ್ವ ಸ್ಮಾರಕಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಆಯವ್ಯಯ ಹಂಚಿಕೆಯನ್ನು ಹೆಚ್ಚಳಗೊಳಿಸತಕ್ಕದ್ದು***

***ವರಮಾನ ಸ್ವೀಕೃತಿಗಳ ಸಂಗ್ರಹಣೆ, ಸುಪರ್ದಿನಲ್ಲಿಟ್ಟುಕೊಳ್ಳುವಿಕೆ ಹಾಗೂ ಪಾವತಿ***

**2.3** ಇಲಾಖೆಯು ವಸ್ತು ಸಂಗ್ರಹಾಲಯಗಳಿಂದ ಪ್ರವೇಶ ಶುಲ್ಕಗಳು / ವಾಹನ ನಿಲುಗಡೆ ಶುಲ್ಕಗಳು, ಸಭಾಂಗಣಗಳಿಂದ / ಕ್ಯಾಂಟೀನು ಕಟ್ಟಡಗಳಿಂದ ಬಾಡಿಗೆ, ಸ್ಮಾರಕಗಳಲ್ಲಿ ಚಿತ್ರೀಕರಣದ ಶುಲ್ಕಗಳು, ಪ್ರಕಟಣೆಗಳ ಮಾರಾಟಗಳು ಮುಂತಾದ ವಿವಿಧ ಮೂಲಗಳಿಂದ ವರಮಾನವನ್ನು ಉತ್ಪಾದಿಸುವುದು.

2017–22ರ ನಡುವಿನ ಐದು ವರ್ಷಗಳ ಅವಧಿಗೆ ಇಲಾಖೆಯು ಪ್ರಮುಖವಾಗಿ ವಸ್ತು ಸಂಗ್ರಹಾಲಯಗಳಿಂದ (₹ 1.55 ಕೋಟಿ) ಹಾಗೂ ಮೈಸೂರಿನ ಆಯುಕ್ತರವರ ಕಛೇರಿಯಿಂದ (₹ 0.13 ಲಕ್ಷ) ₹ 1.68 ಕೋಟಿ ಮೊತ್ತದಷ್ಟು ವರಮಾನದ ಸಂಗ್ರಹಣೆ ಹಾಗೂ ಸರ್ಕಾರಕ್ಕೆ ಪಾವತಿಸಿರುವುದನ್ನು ಈ ಕೆಳಗಿನ ಕೋಷ್ಟಕದಲ್ಲಿ ಸೂಚಿಸಿರುವಂತೆ ವರದಿ ಮಾಡಿರುವುದು.

**ಕೋಷ್ಟಕ ಸಂಖ್ಯೆ 2.3: ಇಲಾಖೆಯು 2017–22 ರಲ್ಲಿ ಸಂಗ್ರಹಿಸಿರುವ ವಿವಿಧ ವರಮಾನಗಳ ವಿವರಗಳನ್ನು ತೋರಿಸುವ ತ:ಖ್ತೆ.**

(₹ ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2017–18 | 2018–19 | 2019–20 | 2020–21 | 2021–22 | ಒಟ್ಟು |
|---|---|---|---|---|---|---|---|
| **ವಸ್ತುಸಂಗ್ರಹಾಲಯಗಳು** | | | | | | | |
| 1 | ಪ್ರವೇಶ ಶುಲ್ಕಗಳು | 23.37 | 24.34 | 22.21 | 5.82 | 12.41 | **88.15** |
| 2 | ವಾಹನ ನಿಲುಗಡೆ ಶುಲ್ಕಗಳು | 10.88 | 13.91 | 12.76 | 2.22 | 3.17 | **42.94** |
| 3 | ಕ್ಯಾಂಟೀನು ಕಟ್ಟಡದಿಂದ ಬಾಡಿಗೆ | 2.22 | 2.04 | 1.85 | 0.00 | 0.00 | **6.11** |
| 4 | ಸಭಾಭವನ ಬಾಡಿಗೆ | 1.68 | 1.68 | 1.57 | 0.34 | 0.00 | **5.27** |
| 5 | ಪ್ರಕಟಣೆಗಳ ಮಾರಾಟದಿಂದ ಪ್ರತಿಫಲಗಳು | 2.78 | 3.27 | 3.55 | 1.21 | 2.18 | **12.99** |
| | **ಉಪ–ಮೊತ್ತ (ಎ)** | **40.93** | **45.24** | **41.94** | **9.59** | **17.76** | **155.46** |

| ಕ್ರಮ ಸಂಖ್ಯೆ | ವಿವರಗಳು | 2017-18 | 2018-19 | 2019-20 | 2020-21 | 2021-22 | ಒಟ್ಟು |
|---|---|---|---|---|---|---|---|
| **ಪ್ರಧಾನ ಕಚೇರಿ ಮೈಸೂರು** | | | | | | | |
| 6 | ಪ್ರಕಟಣೆಗಳ ಮಾರಾಟದಿಂದ ಪ್ರತಿಫಲಗಳು | 1.23 | 1.19 | 1.16 | 0.65 | 0.46 | **4.69** |
| 7 | ಚಲನ ಚಿತ್ರಗಳ ಚಿತ್ರೀಕರಣ | 0.59 | 1.81 | 1.37 | 0.90 | 3.30 | **7.97** |
| 8 | ಇತರವುಗಳು | 0.01 | 0.00 | 0.17 | 0.00 | 0.00 | **0.18** |
| | ಉಪ-ಮೊತ್ತ (ಬಿ) | 1.83 | 3.00 | 2.70 | 1.55 | 3.76 | 12.84 |
| | **ಒಟ್ಟಾರೆ ಮೊತ್ತ (ಎ+ಬಿ)** | **42.76** | **48.24** | **44.64** | **11.14** | **21.52** | **168.30** |

**(ಮೂಲ: ಇಲಾಖೆಯು ಒದಗಿಸಿರುವ ಮಾಹಿತಿಯಂತೆ)**

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

- ಪುರಾತತ್ವ ಸ್ಮಾರಕ ನಿವೇಶನಗಳಿಗೆ ಯಾವುದೇ ಪ್ರವೇಶ ಶುಲ್ಕ / ವಾಹನ ನಿಲುಗಡೆ ಶುಲ್ಕವನ್ನು ನಿಗದಿ ಪಡಿಸಿರುವುದಿಲ್ಲ. ಪ್ರವೇಶ ಶುಲ್ಕವನ್ನು ಬೆಂಗಳೂರು (ವಸ್ತುಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಗಳಿಗೆ ಸಾಮಾನ್ಯ ಪ್ರವೇಶ ಶುಲ್ಕ) ಮತ್ತು ಮಂಗಳೂರು ವಸ್ತು ಸಂಗ್ರಹಾಲಯದಲ್ಲಿ ಮಾತ್ರ ಸಂಗ್ರಹಿಸಲಾಗುತ್ತಿದ್ದಿತು ಹಾಗೂ ವಾಹನ ನಿಲುಗಡೆ ಶುಲ್ಕವನ್ನು ಬೆಂಗಳೂರಿನಲ್ಲಿ ಮಾತ್ರ ಸಂಗ್ರಹಿಸಲಾಗುತ್ತಿದ್ದಿತು. ಮೇ 2019ರಲ್ಲಿ ಪ್ರವೇಶ ಶುಲ್ಕ / ವಾಹನ ನಿಲುಗಡೆ ಶುಲ್ಕ ಪರಿಷ್ಕರಣೆಗಾಗಿ ಹಾಗೂ ಇತರೆ ವಸ್ತು ಸಂಗ್ರಹಾಲಯಗಳಲ್ಲಿ ಪ್ರವೇಶ ಶುಲ್ಕ / ವಾಹನ ನಿಲುಗಡೆ ಶುಲ್ಕಗಳನ್ನು ವಿಧಿಸುವ ಸಲುವಾಗಿ ಇಲಾಖೆಯಿಂದ ಕಳುಹಿಸಲ್ಪಟ್ಟ ಪ್ರಸ್ತಾವನೆಗೆ ಸರ್ಕಾರವು ಅನುಮೋದನೆ ನೀಡಿತು (ಆಗಸ್ಟ್-2019). ಆದಾಗ್ಯೂ ಬೆಂಗಳೂರನ್ನು ಹೊರತುಪಡಿಸಿ ಇತರೆ ಯಾವುದೇ ವಸ್ತುಸಂಗ್ರಹಾಲಯಗಳು ಶುಲ್ಕ ಪರಿಷ್ಕರಣೆ ಆದೇಶವನ್ನು ಕಾರ್ಯಗೊಳಿಸುವುದನ್ನು ಪಾಲಿಸಿರಲಿಲ್ಲ.

- ಪುರಾತತ್ವ ಸ್ಮಾರಕಗಳ ಒಳಗೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಚಲನಚಿತ್ರ / ಡಾಕ್ಯುಮೆಂಟರಿ ಚಿತ್ರೀಕರಣಕ್ಕಾಗಿ ಅನುಮತಿ ನೀಡಲಾಗಿದ್ದಂತಹ ಸಂಸ್ಥೆಗಳು, ಪುರಾತತ್ವ ಸ್ಮಾರಕಗಳ ಹೆಸರು, ಅನುಮತಿ ನೀಡಲಾಗಿದ್ದ ದಿನಗಳು/ ವಾಸ್ತವಿಕವಾಗಿ ಉಪಯೋಗಿಸಿಕೊಳ್ಳಲಾಗಿದ್ದ ದಿನಗಳು, ಸಂಗ್ರಹಿಸಬೇಕಿದ್ದ ಶುಲ್ಕಗಳು ಹಾಗೂ ವಾಸ್ತವಿಕವಾಗಿ ಸಂಗ್ರಹಿಸಲಾದ ಶುಲ್ಕಗಳ ವಿವರಗಳನ್ನು ತಕ್ಕುದಾದ ರೀತಿಯಲ್ಲಿ ಸೂಚಿಸುವ ನಿಟ್ಟಿನಲ್ಲಿ ನಿಯಂತ್ರಣ ರಿಜಿಸ್ಟರುಗಳನ್ನು ಇಲಾಖೆಯು ನಿರ್ವಹಿಸಿರಲಿಲ್ಲ.

ಎಲ್ಲಾ ವಸ್ತು ಸಂಗ್ರಹಾಲಯಗಳಲ್ಲಿ ಪ್ರಸ್ತುತ ಪ್ರವೇಶ ಶುಲ್ಕದ ಮೇಲೆ ಪರಿಷ್ಕೃತ ಸರ್ಕಾರಿ ಆದೇಶಗಳನ್ನು ಜಾರಿಗೆ ತರಲಾಗಿರುವುದು ಹಾಗೂ ವಾಹನ ನಿಲುಗಡೆ ಸ್ಥಳವನ್ನು ಒದಗಿಸಿರುವಂತಹ ಎಲ್ಲಾ ಸ್ಥಳಗಳಲ್ಲಿಯೂ ವಾಹನ ನಿಲುಗಡೆ ಶುಲ್ಕಗಳನ್ನು ಸಂಗ್ರಹಿಸಲಾಗುತ್ತಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್-2023). ಮುಂದುವರೆದು 2023-24 ಹಣಕಾಸಿನ ಸಾಲಿನಿಂದ ಮುಂದಕ್ಕೆ ನಿಯಂತ್ರಣ ರಿಜಿಸ್ಟರಿನ ನಿರ್ವಹಣೆಗಾಗಿ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿಯೂ ತಿಳಿಸಿತು.

***ಪ್ರವೇಶ ಶುಲ್ಕಗಳು / ವಾಹನ ನಿಲುಗಡೆ ಶುಲ್ಕಗಳ ಮೇಲಿನ ಆದೇಶವನ್ನು ಕಾರ್ಯಗತಗೊಳಿಸದಿದ್ದ ಕಾರಣ ವರಮಾನದ ನಷ್ಟ***

**2.3.1** ಪ್ರವಾಸಿಗರುಗಳು / ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡುವವರುಗಳಿಂದ ಸಂಗ್ರಹಿಸಲಾಗುವಂತಹ ಪ್ರವೇಶ ಶುಲ್ಕಗಳು/ ವಾಹನ ನಿಲುಗಡೆ ಶುಲ್ಕಗಳು ಇಲಾಖೆಯು ಉತ್ಪಾದಿಸುವ ವರಮಾನದ ಪ್ರಮುಖ ಮೂಲವಾಗಿರುತ್ತದೆ. ಅದನ್ನು ಇಲಾಖೆಯು ಸರ್ಕಾರಕ್ಕೆ ಪಾವತಿಸುವುದು. ಲೆಕ್ಕಪರಿಶೋಧನೆಗೆ ಒದಗಿಸಲಾಗಿದ್ದಂತಹ ದಾಖಲೆಗಳ ಅನುಸಾರ 2017-18ರಿಂದ 2021-22ರ ಅವಧಿಯಲ್ಲಿ ಪ್ರವೇಶ ಶುಲ್ಕಗಳ ಕಡೆಗೆ ₹ 88.15 ಲಕ್ಷ ಮೊತ್ತ ಹಾಗೂ ವಾಹನ ನಿಲುಗಡೆ ಶುಲ್ಕಗಳ ಕಡೆ ₹ 42.94 ಲಕ್ಷ ಮೊತ್ತದಷ್ಟು ವರಮಾನವನ್ನು ಸಂಗ್ರಹಿಸಲಾಗಿದ್ದಿತು. ಆಗಸ್ಟ್ 2019ರ ಮುಂಚಿನ ಅವಧಿಗೆ ಪ್ರವೇಶ ಶುಲ್ಕವನ್ನು ಬೆಂಗಳೂರಿನಲ್ಲಿ ಮಾತ್ರ (ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಗೆ ಸಾಮಾನ್ಯ ಶುಲ್ಕ). ಹಾಗೂ ಮಂಗಳೂರು ವಸ್ತು ಸಂಗ್ರಹಾಲಯಗಳಿಗೆ ಮಾತ್ರ ವಿಧಿಸಲಾಗುತ್ತಿದ್ದಿತು.

ವಾಹನ ನಿಲುಗಡೆ ಶುಲ್ಕವನ್ನು ಬೆಂಗಳೂರಿನಲ್ಲಿ ಮಾತ್ರ 2017–18ರಿಂದ ಸಂಗ್ರಹಿಸಲಾಗುತ್ತಿದ್ದಿತು. 1998ರಿಂದ ವಿಧಿಸಲಾಗುತ್ತಿದ್ದಂತಹ ಪ್ರವೇಶ ಶುಲ್ಕವನ್ನು ಕೇವಲ ಒಂದು ಸಲ ಅಂದರೆ ಡಿಸೆಂಬರ್–2016ರಲ್ಲಿ ಬೆಂಗಳೂರಿನಲ್ಲಿ ಪರಿಷ್ಕರಿಸಲಾಗಿದ್ದಿತು.

ಮಂಗಳೂರು ವಸ್ತುಸಂಗ್ರಹಾಲಯದಲ್ಲಿ ಪ್ರವೇಶ ಶುಲ್ಕ / ವಾಹನ ನಿಲುಗಡೆ ಶುಲ್ಕ ಪರಿಷ್ಕರಣೆಗಾಗಿ ಹಾಗೂ ಇತರೆ ವಸ್ತು ಸಂಗ್ರಹಾಲಯಗಳಲ್ಲಿ ಪ್ರವೇಶ ಶುಲ್ಕ / ವಾಹನ ನಿಲುಗಡೆ ಶುಲ್ಕಗಳನ್ನು ವಿಧಿಸುವ ಸಲುವಾಗಿ ಇಲಾಖೆಯಿಂದ ಕಳುಹಿಸಲ್ಪಟ್ಟ ಪ್ರಸ್ತಾವನೆಗೆ (ಮೇ 2019) ಸರ್ಕಾರವು ಅನುಮೋದನೆ ನೀಡಿತು (ಆಗಸ್ಟ್ 2019). ಈ ಕ್ರಮವು ಸರ್ಕಾರದ ವರಮಾನವನ್ನು ಹೆಚ್ಚಳಗೊಳಿಸುವುದು ಹಾಗೂ ಈ ವರಮಾನವನ್ನು ಸಂಬಂಧಿತ ವಸ್ತು ಸಂಗ್ರಹಾಲಯಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಉಪಯೋಗಿಸಿಕೊಳ್ಳಬಹುದು, ಇದರ ತತ್ಪರಿಣಾಮವಾಗಿ ಅಂತಹ ವಸ್ತು ಸಂಗ್ರಹಾಲಯಗಳಿಗೆ ಪ್ರವಾಸಿಗರುಗಳ / ಭೇಟಿ ನೀಡುವವರುಗಳ ಸಂಖ್ಯೆಯು ಸುಧಾರಣೆನೆಗೊಳ್ಳುವುದು ಎಂಬ ಕಾರಣಗಳಿಂದ ಸಮರ್ಥಿಸಿಕೊಳ್ಳಲಾಗಿದ್ದಿತು.

ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಇಲಾಖೆಯ ಪ್ರಸ್ತಾವನೆಯಲ್ಲಿ ಹಾಗೂ ಸರ್ಕಾರದ ಅಂತಿಮ ಆದೇಶದಲ್ಲಿ ಅಥಣಿಯ ಸರ್ಕಾರಿ ವಸ್ತು ಸಂಗ್ರಹಾಲಯವನ್ನು ತಪ್ಪಾಗಿ ಕೈಬಿಡಲಾಗಿದ್ದಿತು.

- ಪ್ರವೇಶ ಶುಲ್ಕ/ವಾಹನ ನಿಲುಗಡೆ ಶುಲ್ಕವನ್ನು ಅದಾಗಲೇ ಸಂಗ್ರಹಿಸಲಾಗುತ್ತಿದ್ದ ಬೆಂಗಳೂರು ವಸ್ತುಸಂಗ್ರಹಾಲಯವನ್ನು ಹೊರತುಪಡಿಸಿ, ಉಳಿದ ಯಾವ ವಸ್ತುಸಂಗ್ರಹಾಲಯವೂ ಈ ಆದೇಶವನ್ನು ಪರಿಪೂರ್ಣವಾಗಿ ಪಾಲಿಸಲಿಲ್ಲ. ಕೊಡಗು ಜಿಲ್ಲೆಯ ಮಡಿಕೇರಿ ವಸ್ತು ಸಂಗ್ರಹಾಲಯದಲ್ಲಿ ಮಾತ್ರ 2020–21 ಸಾಲಿನಿಂದ ವಿಧಿಸಲಾಗಿದ್ದಿತು ಮತ್ತು ಸಂಗ್ರಹಿಸಲಾಗಿದ್ದಿತು. ವಾಹನ ನಿಲುಗಡೆ ಶುಲ್ಕವನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಸ್ತು ಸಂಗ್ರಹಾಲಯದಲ್ಲಿ 2021–22 ಸಾಲಿನಿಂದ ಮಾತ್ರ ವಿಧಿಸಲಾಗಿದ್ದಿತು ಹಾಗೂ ಸಂಗ್ರಹಿಸಲಾಗಿದ್ದಿತು.

ಆದೇಶಗಳನ್ನು ಪಾಲಿಸುವುದಾಗಿ ಭರವಸೆಯನ್ನು ನೀಡುವ ವೇಳೆಯಲ್ಲಿ (ಜೂನ್–2022) ಸರ್ಕಾರವು ಪ್ರವೇಶ ಶುಲ್ಕ/ವಾಹನ ನಿಲುಗಡೆ ಶುಲ್ಕವನ್ನು ವಸ್ತುಸಂಗ್ರಹಾಲಯಗಳಲ್ಲಿ ಪಾಲನೆಮಾಡದಿರುವದಕ್ಕೆ ವಸ್ತುಸಂಗ್ರಹಾಲಯಗಳಲ್ಲಿ ಓರ್ವ ಕ್ಯೂರೇಟರ್ ಮತ್ತು ಹೊರಗುತ್ತಿಗೆ ಸಿಬ್ಬಂದಿಯ ಲಭ್ಯತೆ, ಸಿಬ್ಬಂದಿ ಕೊರತೆಯ ಹಾಗೂ ಕೋವಿಡ್ ಪ್ಯಾಂಡಮಿಕ್ ಕಾರಣಗಳಿಂದ ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡುವವರುಗಳ ಸಂಖ್ಯೆಯಲ್ಲಿನ ಗಮನಾರ್ಹ ಕೊರತೆಯ ಕಾರಣಗಳನ್ನು ನೀಡಿತು. ಆದೇಶದ ಅನುಷ್ಠಾನದಲ್ಲಿನ ವಿಳಂಬವು ಎಲ್ಲಾ ವಸ್ತುಸಂಗ್ರಹಾಲಯಗಳಲ್ಲಿ ಪ್ರವೇಶ ಶುಲ್ಕ / ಪಾರ್ಕಿಂಗ್ ಶುಲ್ಕವನ್ನು ಪರಿಚಯಿಸುವ ಉದ್ದೇಶವನ್ನು ವಿಫಲಗೊಳಿಸಿದ್ದು ಮಾತ್ರವಲ್ಲದೆ ನಾಲ್ಕು ವಸ್ತುಸಂಗ್ರಹಾಲಯಗಳಲ್ಲಿ[7] ಸರ್ಕಾರಕ್ಕೆ ₹ 12.71 ಲಕ್ಷ ಮೊತ್ತದಷ್ಟು ವರಮಾನ ನಷ್ಟ ಸಂಭವಿಸುದರಲ್ಲಿ ಪರಿಣಮಿಸಿರುವುದರಿಂದ ಸರ್ಕಾರವು ತಿಳಿಸಿರುವ ಉತ್ತರವು ಒಪ್ಪುವಂತಿಲ್ಲ.

**ಶಿಫಾರಸ್ಸು 3:**

**ವಿವಿಧ ಸೂತ್ರಗಳಿಂದ ಆದಾಯವನ್ನು ಗರಿಷ್ಠವಾಗಿ ಪಡೆಯುವುದಕ್ಕೆ ಸರ್ಕಾರವು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು.**

***ಪಿಡಿ ಖಾತೆಯಲ್ಲಿ ಖರ್ಚಾಗದೆಯೇ ಉಳಿದಿರುವಂತಹ ಅನುದಾನವನ್ನು ಹಿಂಪಾವತಿಸದಿರುವುದು***

**2.4** ಸರ್ಕಾರದ ಸಂಚಿತ ನಿಧಿಗೆ ಖರ್ಚನ್ನು ಹಾಕುವ ಮೂಲಕ ತೆರೆಯಲಾಗಿರುವ ವೈಯಕ್ತಿಕ ಠೇವಣಿ ಖಾತೆಗಳನ್ನು ಅಂತಹ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಖರ್ಚಾಗದೆಯೇ ಉಳಿದಿರುವಂತಹ ಮೊತ್ತದ ಶಿಲ್ಕುಗಳನ್ನು ಪ್ರತಿ ಹಣಕಾಸು ಸಾಲಿನ ಅಂತ್ಯದಲ್ಲಿ ಸಂಚಿತ ನಿಧಿಗೆ ವರ್ಗಾಯಿಸುವ ಮೂಲಕ

[7] ಕಿತ್ತೂರು, ರಾಯಚೂರು, ಕಲಬುರಗಿ ಮತ್ತು ಮೈಸೂರು.

ಮುಕ್ತಾಯಗೊಳಿಸತಕ್ಕದ್ದು ಎಂಬುದಾಗಿ ಕರ್ನಾಟಕ ಹಣಕಾಸು ಸಂಹಿತೆ, 1958ರ (ಕೆಎಫ್‌ಸಿ) ಕಲಂ 286ಎ ನಿರ್ಧಿಷ್ಟಪಡಿಸಿರುತ್ತದೆ.

31 ಮಾರ್ಚ್–2022ರಲ್ಲಿದ್ದಂತೆ ಮೈಸೂರಿನ ಆಯುಕ್ತರ ವೈಯಕ್ತಿಕ ಠೇವಣಿ ಖಾತೆಯನ್ನು[8] ಸಮೀಕ್ಷಿಸಲಾಗಿ, ಅದರಲ್ಲಿ ₹ 12.17 ಕೋಟಿ ಮೊತ್ತದಷ್ಟು ಅಂತಿಮ ಶಿಲ್ಕು ಇರುವುದನ್ನು ತೋರಿಸಿಕೊಟ್ಟಿತು. ಇದರ ಪೈಕಿ ₹ 3.04 ಕೋಟಿ ಮೊತ್ತವು ಮೂರು ವರ್ಷಗಳಿಗಿಂತ (2012ರಿಂದ 2018 ಅವಧಿಗೆ ಸಂಬಂಧಿಸಿದ್ದುದು) ಹೆಚ್ಚಿನ ಅವಧಿಯವರೆಗೆ ಖರ್ಚಾಗದೆಯೇ ಉಳಿದಿದ್ದಿತು. ಈ ಮೊತ್ತವನ್ನು ರಾಜ್ಯದ ಸಂಚಿತ ನಿಧಿಗೆ ಹಿಂಪಾವತಿಸಬೇಕಿದ್ದಿತು.

**ಕೋಷ್ಟಕ ಸಂಖ್ಯೆ 2.4: ಅನುವುಗಳಿಗೆ ವಿರುದ್ದವಾಗಿ ಹಿಡಿದಿಟ್ಟುಕೊಳ್ಳಲಾಗಿದ್ದ ಮೊತ್ತಗಳ ವಿವರಗಳು**

| ಕ್ರಮ ಸಂಖ್ಯೆ | ವಿವರಗಳು | ಯಾವ ಇಲಾಖೆಯ ಮೂಲಕ ಅನುದಾನವನ್ನು ಸ್ವೀಕರಿಸಲಾಗಿರುವುದು | ಖರ್ಚಾಗದೆ ಉಳಿದಿರುವ ಮೊತ್ತ (₹ ಲಕ್ಷಗಳಲ್ಲಿ) | ಯಾವ ಅವಧಿಯಿಂದ ಉಳಿದುಕೊಂಡಿರುವುದು |
|---|---|---|---|---|
| 1 | ಕಕ್ಕಬ್ಬೆ ಅರಮನೆ ಕೊಡಗು ಜಿಲ್ಲೆ | ಪ್ರವಾಸೋದ್ಯಮ ಇಲಾಖೆ | 5.00 | ಮಾರ್ಚ್–2012 |
| 2 | ಜಂಬುನಾಥೇಶ್ವರ ದೇವಸ್ಥಾನ | ಗಣಿ ಮತ್ತು ಭೂ ವಿಜ್ಞಾನ ಇಲಾಖೆ | 30.00 | ಮಾರ್ಚ್–2017 |
| 3 | ಮಾಗಡಿ ಕೋಟೆ, ರಾಮನಗರ ಜಿಲ್ಲೆ | ಪ್ರವಾಸೋದ್ಯಮ ಇಲಾಖೆ | 100.00 | 2017 |
| 4 | ಹಂಪಿ ಬಜಾರು, ಹೊಸಪೇಟೆ | ಹಂಪಿ ವಿಶ್ವಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ | 4.20 | ಜುಲೈ–2017 |
| 5 | ಚಂದ್ರಮೌಳೇಶ್ವರ ದೇವಸ್ಥಾನ, ಮೈಸೂರು | ಜಿಲ್ಲಾಧಿಕಾರಿಯವರು, ಮೈಸೂರು. | 4.00 | ಡಿಸೆಂಬರ್–2018 |
| 6 | ಹುತ್ತರಿ ದುರ್ಗ ಕೋಟೆ, ತುಮಕೂರು | ಜಿಲ್ಲಾಧಿಕಾರಿಯವರು ತುಮಕೂರು | 12.37 | ನವೆಂಬರ್–2018 |
| 7 | ಶ್ರೀರಂಗಪಟ್ಟಣ ಆಬ್ಲಿಸ್ಕ್ಯೂ ದೆಹಲಿಯ ದ್ವಾರ ಮತ್ತು ಕೋಟೆ | ಪುರಾತತ್ವ ಇಲಾಖೆ | 94.00 | ನವೆಂಬರ್–2015 |
| 8 | ಶ್ರೀ ಶಂಬುಲಿಂಗೇಶ್ವರ ದೇವಸ್ಥಾನ, ಕೆ.ಆರ್.ಪೇಟೆ ಮಂಡ್ಯ | ಪ್ರವಾಸೋದ್ಯಮ ಇಲಾಖೆ (ಕೆಟಿಐಎಲ್)[9] | 14.92 | ಕಾಮಗಾರಿಯನ್ನು 2018ರಲ್ಲಿ ರದ್ದುಗೊಳಿಸಲಾಗಿರುವುದು |
| 9 | ಶ್ರೀ ಸೋಮೇಶ್ವರ ದೇವಸ್ಥಾನ, ಕೆ. ಆರ್. ಪೇಟೆ, ಮಂಡ್ಯ | ಪ್ರವಾಸೋದ್ಯಮ ಇಲಾಖೆ (ಕೆಟಿಐಎಲ್) | 39.80 | ಕಾಮಗಾರಿಯನ್ನು 2018ರಲ್ಲಿ ರದ್ದುಗೊಳಿಸಲಾಗಿರುವುದು |
| | **ಒಟ್ಟು** | | **304.29** | |

**(ಮೂಲ: ಇಲಾಖೆಯು ಒದಗಿಸಿರುವ ಮಾಹಿತಿಯಿಂದ ಸಂಕಲನ ಗೊಳಿಸಲಾಗಿರುವುದು)**

- ವೈಯಕ್ತಿಕ ಠೇವಣಿ ಖಾತೆಯು ₹ 54.72 ಲಕ್ಷ ಮೊತ್ತವನ್ನು ಒಳಗೊಂಡಿರುವುದು, ಈ ಮೊತ್ತವನ್ನು ಕೆಟಿಐಎಲ್‌ಗೆ ಹಿಂಪಾವತಿಸಲಾಗಿರುವುದಿಲ್ಲ. ಈ ಮೊತ್ತವನ್ನು ಪುನರ್ ಸ್ಥಾಪಿಸುವ ಕಾಮಗಾರಿಗಳಿಗಾಗಿ ಬಿಡುಗಡೆಗೊಳಿಸಲಾಗಿದ್ದಿತು ಹಾಗೂ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿನ ವಿಳಂಬದಲ್ಲಿನ ಕಾರಣ 2018 ರಲ್ಲಿ ರದ್ದುಗೊಳಿಸಲಾಗಿದ್ದಿತು.

ಸಂಬಂಧಿತ ಇಲಾಖೆಯ ಅನುಮತಿಯೊಂದಿಗೆ ಪೂರ್ಣಗೊಳಿಸಲಾಗಿರುವಂತಹ ಕಾಮಗಾರಿಗಳಿಂದ ಉಳಿತಾಯವಾಗಿರುವಂತಹ ಮೊತ್ತವನ್ನು ಹೊಸ ಕಾಮಗಾರಿಗಳಿಗಾಗಿ ಅಥವಾ ಇತರೆ ಕಾರ್ಯಗತಗೊಳಿಸಲು ಉಳಿದುಕೊಂಡಿರುವ ಕಾಮಗಾರಿಗಳಿಗಾಗಿ ಉಪಯೋಗಿಸಿಕೊಳ್ಳಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್–2023). ನಿರ್ಧಿಷ್ಟ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಗಾಗಿ ಸರ್ಕಾರಿ ಇಲಾಖೆಗಳು/ ಸಂಸ್ಥೆಗಳ ಮೂಲಕ ಅನುದಾನಗಳನ್ನು ಸ್ವೀಕರಿಸಲಾಗಿರುವುದರಿಂದ ಹಾಗೂ ಅಂತಹ ಆಯವ್ಯಯಗಳ ಮೂಲಕ ಹಂಚಿಕೆಯಾಗಿರುವ ಅನುದಾನಗಳ ಯಾವುದೇ ಮಾರ್ಗಾಂತರಣಕ್ಕಾಗಿ ಕರ್ನಾಟಕ ಆಯವ್ಯಯ ಕೈಪಿಡಿಯ ಅನುಸಾರ ಶಾಸಕಾಂಗದ ಅನುಮತಿಯ ಅಗತ್ಯತೆ ಇರುವುದರಿಂದ ಉತ್ತರವು ಒಪ್ಪುವಂತಿಲ್ಲ.

[8] ಪಿಡಿ ಖಾತೆ ಸಂಖ್ಯೆ. 27577A028.

[9] ಕರ್ನಾಟಕ ಪ್ರವಾಸೋಧ್ಯಮ ಮೂಲಸೌಕರ್ಯ ನಿಯಮಿತ, ಕರ್ನಾಟಕ ಸರ್ಕಾರದ ಒಂದು ಉದ್ದಿಮೆ.